ಉ) ಮಧುಗಿರಿ ತಾಲ್ಲೂಕಿನಲ್ಲಿ 54392 ಬಿಪಿಎಲ್ ಮತ್ತು 12,724 ಎಪಿಎಲ್ ಒಟ್ಟು 67,116 ತಾತ್ಕಾಲಿಕ ಪಡಿತರ ಚೀಟಿಗಳನ್ನು ನೀಡಲಾಗಿರುತ್ತದೆ.

ರಸ್ತೆ ದಿಬ್ಬಗಳು

954 (101) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಮಡಿಕೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನಿಂದ ಬೆಂಗಳೂರಿನವರೆಗೆ ಹೊಸದಾಗಿ ನಿರ್ಮಿಸಿರುವ ರಸ್ತೆಯಲ್ಲಿ ಎಷ್ಟು ರಸ್ತೆ ದಿಬ್ಬಗಳಿವೆ (ಹಂಪ್ಸ್);

ಆ) ಈ ಬಗ್ಗೆ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ರಸ್ತೆ ದಿಬ್ಬಗಳನ್ನು (ಹಂಪ್ಸ್) ಹಾಕಲು ಕಾರಣವೇನು;

ಇ) ಈ ರಸ್ತೆ ದಿಬ್ಬಗಳನ್ನು ಹಾಕಿರುವುದು ಸರ್ಕಾರದವರೇ ಅಥವಾ ಖಾಸಗಿ ಸಂಸ್ಥೆಯವರೇ;

ಈ) ಈ ಬಗ್ಗೆ ಸರ್ಕಾರದಿಂದ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಪಿ.ಎಂ ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಒಟ್ಟು 63 ಸಂಖ್ಯೆ ರಸ್ತೆ ದಿಬ್ಬಗಳಿರುತ್ತವೆ. ಇದರಲ್ಲಿ 31 ಸಂಖ್ಯೆಯು ಎಡಭಾಗದ ಕಯಾರೇಜ್ ವೇನಲ್ಲಿ ಹಾಗೂ 32 ಸಂಖ್ಯೆ ಬಲಭಾಗದ ಕ್ಯಾರೇಜ್‌ವೇನಲ್ಲಿ ಇರುತ್ತದೆ.

ಆ) ಪಟ್ಟಣ ಮತ್ತು ಶಾಲಾ ಪರಿಮಿತಿಯಲ್ಲಿ ಹಾಗೂ ಅಪಘಾತಗಳು ಸಂಭವಿಸಿರುವ ಸ್ಥಳಗಳಲ್ಲಿ ಸ್ಥಳೀಯ ನಾಗರೀಕರ ಒತ್ತಾಯದ ಮೇರೆಗೆ ಖಾಸಗಿಯವರೇ 53 ದಿಬ್ಬಗಳನ್ನು ನಿರ್ಮಿಸಿಕೊಂಡಿರುತ್ತಾರೆ.

ಇ) ಮಂಡ್ಯ ಮತ್ತು ಮದ್ದೂರು ಪಟ್ಟಣ ಪರಿಮಿತಿಯಲ್ಲಿ ಎಡ ಹಾಗೂ ಬಲ ಪಥಗಳಲ್ಲಿ ಒಟ್ಟಾರೆ 10 ರಸ್ತೆ ಉಬ್ಬುಗಳನ್ನು ಸಂಬಂಧಪಟ್ಟ ಸಂಚಾರಿ ಪೋಲೀಸ್‌ನವರ ಸಲಹೆಯಂತೆ ಇಲಾಖಾ ವತಿಯಿಂದಲೇ ನಿರ್ಮಿಸಲಾಗಿದೆ. ಉಳಿದ 53 ಸಂಖ್ಯೆ. ಉಬ್ಬುಗಳನ್ನು ಸ್ಥಳೀಯ ನಾಗರೀಕರ ಒತ್ತಾಯದ ಮೇರೆಗೆ ಖಾಸಗಿಯವರೇ ನಿರ್ಮಿಸಿಕೊಂಡಿರುತ್ತಾರೆ.

ಈ) ಸ್ಥಳೀಯ ಹಾಗೂ ಸಾರ್ವಜನಿಕರ ಒತ್ತಾಯದ ಮೇರೆಗೆ ಸದರಿ ಉಬ್ಬುಗಳು ಹಾಗೆಯೇ ಉಳಿದಿರುತ್ತವೆ.